# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

ಮಲ್ಲೇಶ್ವರಂ, ಬೆಂಗಳೂರು–560003

# KARNATAKA SCHOOL EXAMINATION AND ASSESSMENT BOARD

Malleshwaram, Bengaluru-560003

## ಎಸ್.ಎಸ್.ಎಲ್.ಸಿ. ಮಾದರಿ ಪ್ರಶ್ನೆಪತ್ರಿಕೆ 2022–23

### ವಿಷಯ : ಸಮಾಜ ವಿಜ್ಞಾನ

**ಮಾಧ್ಯಮ : ಕನ್ನಡ**

**ಸಮಯ: 3 ಗಂಟೆ 15 ನಿಮಿಷಗಳು** **ವಿಷಯ ಸಂಕೇತ: 85K**

**ಗರಿಷ್ಠ ಅಂಕಗಳು : 80**

**CCE-RF**

**Revised**

**ಶಾಲಾ ಅಭ್ಯರ್ಥಿಗಳಿಗೆ**

---

***ಪರೀಕ್ಷಾರ್ಥಿಗಳಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ 38 ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವೂ ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

**I ಪ್ರತಿ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅದನ್ನು ಪೂರ್ಣಗೊಳಿಸಲು ಸರಿಯಾದ ಉತ್ತರವನ್ನು ಆರಿಸಿ ಅದರ ಕ್ರಮಾಕ್ಷರದೊಂದಿಗೆ ನಿಮ್ಮ ಉತ್ತರ ಪತ್ರಿಕೆಯಲ್ಲಿ ಬರೆಯಿರಿ. 8x1=8**

1. **ಭಾರತದಲ್ಲಿ ಮೊದಲ ಭಾಷಾವಾರು ರಾಜ್ಯವಾಗಿ ರಚನೆಗೊಂಡ ರಾಜ್ಯ**

   A) ಮೈಸೂರು ರಾಜ್ಯ B) ಆಂಧ್ರ ಪ್ರದೇಶ

   C) ಸೌರಾಷ್ಟ್ರ D) ಉತ್ತರ ಪ್ರದೇಶ

2. **ಮೊದಲನೇ (ವಿಶ್ವ ಸಮರಕ್ಕೆ) ಮಹಾಯುದ್ಧಕ್ಕೆ ತಕ್ಷಣದ ಕಾರಣ**

   A) ಕದನ ಬಾಂಧವ್ಯ ತ್ರಯ ಮತ್ತು ಕದನ ಸೌಹಾರ್ದ ತ್ರಯ ರಚನೆ

   B) ಅಮೆರಿಕ ಅನುಸರಿಸಿದ ತಟಸ್ಥ ನೀತಿ

   C) ಅವಮಾನಕಾರಿಯಾದ ವರ್ಸೇಲ್ಸ್ ಒಪ್ಪಂದ

   D) ಆರ್ಕ್‌ಡ್ಯೂಕ್ ಫ್ರಾನ್ಸಿಸ್ ಫರ್ಡಿನೆಂಡ್‌ನ ಹತ್ಯೆ

3. **ನಮ್ಮ ಸಂವಿಧಾನದ 21A ವಿಧಿ ಸೂಚಿಸುವುದು**

   A) ಧಾರ್ಮಿಕ ಮೂಲಭೂತ ಹಕ್ಕು

   B) ಶೋಷಣೆಯ ವಿರುದ್ಧದ ಮೂಲಭೂತ ಹಕ್ಕು

   C) ಸಂವಿಧಾನಾತ್ಮಕ ಪರಿಹಾರದ ಮೂಲಭೂತ ಹಕ್ಕು

   D) ಶೈಕ್ಷಣಿಕ ಮೂಲಭೂತ ಹಕ್ಕು

4. **ಕೂಲಿ ರಹಿತ ದುಡಿಮೆಗೆ ಉತ್ತಮ ಉದಾಹರಣೆ**

   A) ಜೀತದಾಳು B) ಕೃಷಿ ಕಾರ್ಮಿಕ

   C) ಗೃಹಿಣಿ D) ಕೈತೋಟಗಾರ

5. **ಸಾಂಪ್ರದಾಯಿಕ ಶಕ್ತಿಸಂಪನ್ಮೂಲಕ್ಕೆ ಒಂದು ಉದಾಹರಣೆ**

   A) ಪವನ ಶಕ್ತಿ B) ಸ್ವಾಭಾವಿಕ ಅನಿಲ

   C) ಸೌರ ಶಕ್ತಿ D) ಜಲವಿದ್ಯುತ್ ಶಕ್ತಿ

6. ಭಾರತದ ಚಹಾ ಬಂದರು

A) ನವ ಮಂಗಳೂರು
B) ಹಾಲ್ದಿಯಾ
C) ಪಾರಾದೀಪ್
D) ಕೊಲ್ಕತ್ತಾ

7. ಜಿಲ್ಲಾ ಕೈಗಾರಿಕಾ ಕೇಂದ್ರ ಸ್ಥಾಪನೆಯಾದ ವರ್ಷ

A) 1968
B) 1978
C) 1988
D) 1998

8. ಭಾರತದ ಹಸಿರು ಕ್ರಾಂತಿಯ ಪಿತಾಮಹ

A) ಡಾ. ನಾರ್ಮನ್ ಬೋರ್‌ಲಾಗ್
B) ಕಿರಣ್ ಮಜುಮ್‌ದಾರ್ ಷಾ
C) ಡಾ. ಎಂ.ಎಸ್. ಸ್ವಾಮಿನಾಥನ್
D) ವರ್ಗೀಸ್ ಕುರಿಯನ್

**II ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯಗಳಲ್ಲಿ ಉತ್ತರಿಸಿರಿ. 8x1=8**

9. ಸರದಾರ್ ವಲ್ಲಭ್ ಭಾಯ್ ಪಟೇಲರನ್ನು ಭಾರತದ ಉಕ್ಕಿನ ಮನುಷ್ಯ ಎಂದು ಏಕೆ ಕರೆಯುತ್ತಾರೆ?

10. ದೆಹಲಿಯ ತೀನ್ ಮೂರ್ತಿ ಭವನದ ಪ್ರಾಮುಖ್ಯತೆ ಏನು?

11. ವಿಶ್ವ ಸಂಸ್ಥೆಯ ಭದ್ರತಾ ಸಮಿತಿಯಲ್ಲಿ ಭಾರತಕ್ಕೆ ಖಾಯಂ ಸದಸ್ಯತ್ವ ದೊರೆಯಬೇಕೆಂದು ಪ್ರತಿಪಾದಿಸುತ್ತಿರುವ ದೇಶ ಯಾವುದು?

12. ಪ್ರಸವ ಪೂರ್ವ ಲಿಂಗ ಪರೀಕ್ಷೆ ಪ್ರತಿಬಂಧಕ ಕಾಯ್ದೆಯನ್ನು ಏಕೆ ಜಾರಿಗೆ ತರಲಾಯಿತು?

13. ವರದಕ್ಷಿಣೆ ಎಂದರೇನು?

14. ತೀರದುದ್ದಕ್ಕೂ ಮ್ಯಾಂಗ್ರೂವ್ ಅರಣ್ಯಗಳನ್ನು ಏಕೆ ಬೆಳೆಯಬೇಕು?

15. ಆಯವ್ಯಯ ಎಂದರೇನು?

16. ಮಾರುತಿಯು ವಿದೇಶಿ ಪ್ರವಾಸ ಕೈಗೊಳ್ಳಲು ಯೋಜಿಸಿದ್ದಾನೆ. ಅವನ ಅನುಪಸ್ಥಿತಿಯಲ್ಲಿ ತನ್ನ ಎಲ್ಲಾ ಒಡವೆಗಳನ್ನು ಸಂರಕ್ಷಿಸಲು ಬ್ಯಾಂಕಿನಿಂದ ಯಾವ ಸೇವೆ ಪಡೆಯಬಹುದು?

**III ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ / ಅಂಶಗಳಲ್ಲಿ ಉತ್ತರಿಸಿರಿ. 8x2=16**

17. 19ನೇ ಶತಮಾನದಲ್ಲಿ ಸಾಮಾಜಿಕ–ಧಾರ್ಮಿಕ ಸುಧಾರಣೆಗಳನ್ನು ತಂದ ಸಂಘಗಳನ್ನು ಹೆಸರಿಸಿ.
18. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಪರಿಣಾಮಗಳೇನು?
19. ಪ್ರಾಂತೀಯತೆ ಸಮಸ್ಯೆಯನ್ನು ಬಗೆಹರಿಸಲು ಕೈಗೊಂಡಿರುವ ಕ್ರಮಗಳನ್ನು ಪಟ್ಟಿಮಾಡಿ.

ಅಥವಾ

ಭಯೋತ್ಪಾದಕತೆ ನಿಗ್ರಹಕ್ಕೆ ಕೈಗೊಂಡಿರುವ ಕ್ರಮಗಳನ್ನು ಪಟ್ಟಿಮಾಡಿ.

20. ಅಸ್ಪೃಶ್ಯತೆ ತೊಡೆದುಹಾಕಲು ಕಾನೂನಾತ್ಮಕ ಕ್ರಮಗಳು ಯಾವುವು?

ಅಥವಾ

ಗ್ರಾಮೀಣ ಸ್ತ್ರೀಯರು ಅಭಿವೃದ್ಧಿ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಲು ಸಹಕಾರಿಯಾಗಿರುವ ಕಾರ್ಯಕ್ರಮಗಳು ಯಾವುವು?

21. ಭಾರತದ ಋತುಗಳನ್ನು ಅವುಗಳ ತಿಂಗಳುಗಳೊಂದಿಗೆ ಹೆಸರಿಸಿ.
22. ರಾಷ್ಟ್ರೀಯ ವಿದ್ಯುತ್ ಜಾಲ ಹೇಗೆ ಸಹಕಾರಿಯಾಗಿದೆ?
23. ಭಾರತದಲ್ಲಿ ಕೈಗೊಂಡಿರುವ ವಸತಿ ಯೋಜನೆಗಳನ್ನು ಹೆಸರಿಸಿ.
24. ಗ್ರಾಹಕ ರಕ್ಷಣಾ ಕಾಯ್ದೆಯ ಮುಖ್ಯ ಉದ್ದೇಶಗಳೇನು?

**IV ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಮೂರರಿಂದ ಆರು ವಾಕ್ಯಗಳಲ್ಲಿ ಉತ್ತರಿಸಿರಿ. 9x3=27**

25. ರಾಜಾ ಮಾರ್ತಾಂಡವರ್ಮನು ತನ್ನ ರಾಜ್ಯವನ್ನು ಹೇಗೆ ಬಲಿಷ್ಠ ಹಾಗೂ ಪ್ರಾಬಲ್ಯಗೊಳಿಸಿದನೆಂದು ವಿವರಿಸಿ.

**ಅಥವಾ**

ವೆಲ್ಲೆಸ್ಲಿಯು ಭಾರತೀಯ ಅರಸರನ್ನು ತಮ್ಮ ಹಿಡಿತಕ್ಕೆ ಹೇಗೆ ತಂದನೆಂದು ವಿವರಿಸಿ.

26. ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಸಾಧನೆಗಳೇನು?
27. 'ಸ್ವಾತಂತ್ರ್ಯದ ಸಮಯದಲ್ಲಿ ಭಾರತದ ವಿಭಜನೆ ಅನಿವಾರ್ಯವಾಗಿತ್ತು', ಸ್ಪಷ್ಟೀಕರಿಸಿ.
28. ವಿಶ್ವ ಸಂಸ್ಥೆಯ ಗುರಿಗಳು ಮತ್ತು ಉದ್ದೇಶಗಳೇನು?
29. ನಿರುದ್ಯೋಗ ಸಮಸ್ಯೆಯನ್ನು ಎದುರಿಸಲು ಸರ್ಕಾರ ಕೈಗೊಂಡಿರುವ ಯೋಜನೆಗಳೇನು?
30. ಭಾರತದ ಮೇರೆಗಳು ಮತ್ತು ನೆರೆದೇಶಗಳ ಬಗ್ಗೆ ಬರೆಯಿರಿ.

31. ಕಾಡುಗಳ ಸಂರಕ್ಷಣೆ ಅತ್ಯವಶ್ಯಕವಾಗಿದೆ. ಏಕೆ?

**ಅಥವಾ**

ಬೆಳೆಯ ಮಾದರಿಗಳು ಪ್ರದೇಶದಿಂದ ಪ್ರದೇಶಕ್ಕೆ ಬದಲಾಗುತ್ತದೆ. ಏಕೆ?

32. ಭಾರತದಲ್ಲಿ ವಿಕೇಂದ್ರೀಕರಣದ ಜಾರಿಗಾಗಿ ಕೈಗೊಂಡ ಕ್ರಮಗಳೇನು?

**ಅಥವಾ**

ಹಸಿರು ಕ್ರಾಂತಿ ಉಂಟು ಮಾಡಲು ಕೈಗೊಂಡ ಕ್ರಮಗಳೇನು?

33. ಬ್ಯಾಂಕುಗಳ ಕಾರ್ಯಗಳಾವುವು?

**ಅಥವಾ**

ಉದ್ಯಮಗಾರನ ಗುಣಲಕ್ಷಣಗಳೇನು?

**V ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಎಂಟು ವಾಕ್ಯಗಳು ಅಥವಾ ಅಂಶಗಳಲ್ಲಿ ಉತ್ತರಿಸಿರಿ. 4x4=16**

34. ದಕ್ಷಿಣ ಭಾರತದಲ್ಲಿ ಆಂಗ್ಲರು ಮತ್ತು ಫ್ರೆಂಚರು ತಮ್ಮ ಪ್ರಾಬಲ್ಯ ಉಳಿಸಿಕೊಳ್ಳಲು ಮಾಡಿದ ಹೋರಾಟವನ್ನು ವಿವರಿಸಿ.

35. ಭಾರತದಲ್ಲಿ ಬ್ರಿಟೀಷ್ ಶಿಕ್ಷಣ ಪದ್ಧತಿಯಿಂದಾದ ಪರಿಣಾಮಗಳೇನು?

**ಅಥವಾ**

ಭಾರತದಲ್ಲಿ ಬ್ರಿಟೀಷರ ಭೂ ಕಂದಾಯ ಪದ್ಧತಿಯಿಂದಾದ ಪರಿಣಾಮಗಳೇನು?

36. ಭಾರತದಲ್ಲಿ ಸ್ತ್ರೀಯರ ಸ್ಥಾನಮಾನ ಉತ್ತಮ ಪಡಿಸಲು ಕೈಗೊಂಡಿರುವ ಕ್ರಮಗಳೇನು?

37. ಕಪ್ಪು ಮಣ್ಣು, ಜಂಬಿಟ್ಟಿಗೆ ಮಣ್ಣಿಗಿಂತ ಹೇಗೆ ಭಿನ್ನವಾಗಿದೆ?

**VI 38. ಭಾರತದ ನಕ್ಷೆ ಬರೆದು ಅದರಲ್ಲಿ ಕೆಳಗಿನ ಸ್ಥಳಗಳನ್ನು ಗುರುತಿಸಿರಿ. 1+4=5**

a) ಹಟ್ಟಿ ಚಿನ್ನದ ಗಣಿ  c) ಕೊಚ್ಚಿ

b) ಭದ್ರಾವತಿ  d) ಕಲ್ಪಾಕಂ

ದೃಷ್ಠಿ ವಿಕಲಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ.

**(ಪ್ರಶ್ನೆ ಸಂಖ್ಯೆ 38ರ ಬದಲಿಗೆ)**

ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳ ಮುಖ್ಯ ಉದ್ದೇಶಗಳೇನು?

******